# ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ

## ಕ್ರಿಮಿನಲ್ ಮಿಸಿಲೇನಿಯಸ್ ನಂ: 517/2021

**ಪಿಡಬ್ಲ್ಯೂ:01**

**ಶ್ರೀಮತಿ: ಮಮತಾ ಕೊಂ.ವಿಜಯ ಮಹಾಂತೇಶ**

**ದಿ: 29-01-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲು :ಎದುರುದಾರರ ಪರ ಶ್ರೀ.ಎಂ.ಬಿ.ಕೆ. ವಕೀಲರವರಿಂದ:**

ಎದುರುದಾರರು ಸುಮಾರು **5-6** ಲಕ್ಷ ಹಣವನ್ನು ಖರ್ಚು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಮದುವೆಯಾದ ನಂತರ ನನ್ನ ಗಂಡನ ಮನೆಯಾದ ಇರಕಲಗಡ ಗ್ರಾಮ ಕೊಪ್ಪಳ ಜಿಲ್ಲೆಯಲ್ಲಿ **4-5** ತಿಂಗಳು ಮಾತ್ರ ವಾಸವಿದ್ದೆ ಎಂದರೆ ಸರಿ. ಆ ನಂತರ ಬೆಂಗಳೂರಿನಲ್ಲಿ ನನ್ನ ಗಂಡನ ಜೊತೆ ಆತನು ಕೆಲಸ ಮಾಡುವ ಸ್ಥಳದಲ್ಲಿ ಒಟ್ಟಿಗೆ ಕಮಲಾ ನಗರದಲ್ಲಿ ವಾಸವಿದ್ದೆವು ಎಂದರೆ ಸರಿ. ಬೆಂಗಳೂರಿನಲ್ಲಿ ಎದುರುದಾರರೇ ಮನೆ ಬಾಡಿಗೆ ಹಾಗೂ ಮನೆ ಇತರೆ ಖರ್ಚುಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಸಾಕ್ಷಿಯ ಸ್ವ ಇಚ್ಛೆಯಿಂದ **01** ತಿಂಗಳು ಮಾತ್ರ ನೋಡಿಕೊಂಡರು ಎಂದರೆ ನುಡಿಯುತ್ತಾರೆ. **2012** ರ ಡಿಸೆಂಬರ ಮಾಹೆಯಿಂದ **2017** ನೇ ಸಾಲಿನವರೆಗೂ ನಾವು ಬೆಂಗಳೂರಿನಲ್ಲಿ ಇದ್ದೆವು ಎಂದರೆ ಸರಿ.

**02. 2013** ನೇ ಸಾಲಿನಲ್ಲಿ ಒಂದು ಹೆಣ್ಣು ಮಗು ಹುಟ್ಟಿರುತ್ತದೆ. **2017** ನೇ ಸಾಲಿನಿಂದ **2019** ನೇ ಸಾಲಿನವರೆಗೂ ಎದುರುದಾರರು ಗುಜುರಾತಿಗೆ ಕೆಲಸಕ್ಕೆಂದು ಹೋಗಿರುತ್ತಾರೆ ಎಂದರೆ ಸರಿ. ಗುಜರಾತಿನಿಂದ ಬೆಂಗಳೂರಿಗೆ ವರ್ಷಕ್ಕೊಮ್ಮೆ ಅಥವಾ **06** ತಿಂಗಳಿಗೊಮ್ಮೆ ಎದುರುದಾರರು ಬರುತ್ತಿದ್ದರು. **2019-2020** ನೇ ಸಾಲಿಗೆ ಎದುರುದಾರರು ಬೆಂಗಳೂರಿಗೆ ಪುನಃ ವಾಪಸಾಗಿರುತ್ತಾರೆ ಎಂದರೆ ಸರಿ. ಎದುರುದಾರರು ವಾಪಸಾದಾಗ ಅವರಿಗೆ ವಾಸಿಯಾಗದ ಕಾಯಿಲೆ ಇತ್ತು ಎಂದರೆ ಸರಿ. **2020** ನೇ ಸಾಲಿನಲ್ಲಿ ಎದುರುದಾರನಿಗೆ **HIV** ಕಾಯಿಲೆ ಜಾತ್ತಿಯಾಗಿರುವುದು ಕಂಡು ಬಂದಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು **2016** ನೇ ಸಾಲಿನಲ್ಲಿ ಎದುರುದಾರನಿಗೆ **HIV** ಕಾಯಿಲೆ ಇರುವ ಬಗ್ಗೆ ತಿಳಿದುಬಂದಿರುತ್ತದೆ ಎಂದು ನುಡಿದಿರುತ್ತಾರೆ. **2020** ನೇ ಸಾಲಿನಲ್ಲಿ ನಾನು ನನ್ನ ತವರುಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ತನ್ನ

ಗಂಡನ ಮನೆಯಾದ ಇರಕಲಗಡ ಗ್ರಾಮಕ್ಕೆ ಕರೆದುಕೊಂಡು ಬಂದರು. ಆನಂತರ ನಾನು ನನ್ನ ಗಂಡನ ಮನೆಯಲ್ಲಿ **1** ವಾರ ಇದ್ದೆ. ನಾವು ಬೆಂಗಳೂರಿನಲ್ಲಿ ಇದ್ದಾಗ ನಮ್ಮ ಅತ್ತೆ ಮಾವ ನಮ್ಮ ಜೊತೆ ಇರಲಿಲ್ಲ ಎಂದರೆ ಸರಿ. ಆ ಒಂದು ವಾರದಲ್ಲಿ ನಾನು ನನ್ನ ಗಂಡನ ಸಂಪೂರ್ಣ ಮನೆಯವರ ವಿರುದ್ಧ ಭಾರತ ದಂಡ ಸಂಹಿತೆ ಕಲಂ **498** ಎ. ರೀತಿಯ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿದಾರರು ಮುಂದುವರೆದು ಆ ಒಂದು ವಾರದಲ್ಲಿ ನನ್ನ ಅತ್ತೆ ಮನೆಯವರು ನನ್ನನ್ನು ಮತ್ತು ನನ್ನ ಮಗಳನ್ನು ಮಾತನಾಡಿಸದೆ ನನ್ನ ಗಂಡನಿಗೆ **HIV** ಇದ್ದ ಕಾರಣ ಒಂದೇ ಕಡೆ ಕೂರುವಂತೆ ನಿಂದಿಸಿದ್ದರು.

**03.** ನನ್ನ ಅತ್ತೆ, ನನ್ನ ಮಾವ, ಮೈದುನ, ಆತನ ಹೆಂಡತಿ ನನಗೆ ಯಾವುದೇ ರಿತಿಯಲ್ಲಿ ತೊಂದೆರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನಿಗೆ ವಾಸಿಯಾಗದ ಕಾಯಿಲೆ ಇರುವ ಕಾರಣ ನಾನೇ ಅವರನ್ನು ದೂರ ಇಟ್ಟು ಎದುರುದಾರನ ವಿರುದ್ದ ಆತನ ಕುಟುಂಬದ ವಿರುದ್ಧ ದೂರನ್ನು ದಾಖಲಿಸಿದ್ದೆ ಎಂದರೆ ಸರಿಯಲ್ಲ.

(ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ನೀಡಲಾಯಿತು.)

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

"ನನ್ನ ಸಮಕ್ಷಮ"

**Sd/-**

(ಭಾಗ್ಯಲಕ್ಷ್ಮೀ)

ಇಟರನರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು.,

ಹಡಗಲಿ.